# ಗ್ರಾಮ ಪಂಚಾಯತ್ ಚುನಾವಣೆ: ಸಂವಿಧಾನ ಹಾಗೂ ಕಾನೂನು ಹೇಳುವುದೇನು?

ಕೋವಿಡ್–19ರ ಪರಿಸ್ಥಿತಿಯನ್ನು 'ಅಸಾಧಾರಣ ಪರಿಸ್ಥಿತಿ' ಎಂದು ಪರಿಗಣಿಸಿ ರಾಜ್ಯ ಚುನಾವಣಾ ಆಯೋಗವು ಗ್ರಾಮ ಪಂಚಾಯತ್ ಚುನಾವಣೆಗಳನ್ನು ಮುಂದೂಡಿ ಆದೇಶ ಹೊರಡಿಸಿದೆ. ಈ ಆದೇಶ ಹೊರಡಿಸಲು ಭಾರತದ ಸಂವಿಧಾನದ ಪರಿಚ್ಛೇದ 243–ಕೆಯನ್ನು ರಾಜ್ಯ ಚುನಾವಣಾ ಆಯೋಗ ಉಲ್ಲೇಖಿಸಿ, ರಾಜ್ಯ ಚುನಾವಣಾ ಆಯೋಗಕ್ಕೆ ಸಂವಿಧಾನ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಗ್ರಾಮ ಪಂಚಾಯತ್‌ಗಳ ಸಾರ್ವತ್ರಿಕ ಚುನಾವಣೆಗಳನ್ನು ಅನಿವಾರ್ಯವಾಗಿ ತಾತ್ಕಾಲಿಕವಾಗಿ ಮುಂದೂಡಲು ತೀರ್ಮಾನಿಸಲಾಗಿದೆ ಎಂದಿದೆ. ಈ ಹಿನ್ನೆಲೆಯಲ್ಲಿ, ಸಂವಿಧಾನ ಹಾಗೂ ಕಾನೂನು ಈ ಬಗ್ಗೆ ಹೇಳುವುದೇನೆಂಬುದನ್ನು ವಿಮರ್ಶಾತ್ಮಕವಾಗಿ ಅರ್ಥಮಾಡಿಕೊಳ್ಳುವುದು ಅತ್ಯಂತ ಪ್ರಮುಖವಾಗಿದೆ.

ಸಂವಿಧಾನದ ವಿಧಿ 243 ಕೆ (1) ಹೇಳುವಂತೆ, *"ಪಂಚಾಯತಿಗಳಿಗೆ ನಡೆಯುವ ಎಲ್ಲ ಚುನಾವಣೆಗಳಿಗೆ ಸಂಬಂಧಪಟ್ಟಂತೆ ಮತದಾರರ ಪಟ್ಟಿಗಳ ತಯಾರಿಕೆಯ ಮತ್ತು ಆ ಎಲ್ಲ ಚುನಾವಣೆಗಳ ನಿರ್ವಹಣೆಯ ಮೇಲಿನ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ರಾಜ್ಯಪಾಲನಿಂದ ನೇಮಕಗೊಳ್ಳುವ ರಾಜ್ಯ ಚುನಾವಣಾ ಆಯುಕ್ತನನ್ನು ಒಳಗೊಂಡಿರುವ* ***ರಾಜ್ಯ ಚುನಾವಣಾ ಆಯೋಗದಲ್ಲಿ ನಿಹಿತವಾಗಿರತಕ್ಕದ್ದು."*** ಅಂದರೆ, ಈ ಎಲ್ಲಾ ಪ್ರಕ್ರಿಯೆಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ತಪ್ಪದೇ ಆಗದಂತೆ ನೋಡಿಕೊಳ್ಳುವುದು ರಾಜ್ಯ ಚುನಾವಣಾ ಆಯೋಗದ **ಆದ್ಯ ಕರ್ತವ್ಯವೇ ಹೊರತೂ ಅಧಿಕಾರವಲ್ಲ**. ರಾಜ್ಯ ಚುನಾವಣಾ ಆಯೋಗವೇ ಉಲ್ಲೇಖಿಸಿದಂತೆ, *ಕಿಷನ್‌ಸಿಂಗ್ ತೋಮರ್ ವಿರುದ್ಧದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಆದೇಶದಲ್ಲಿ ಹೇಳಿರುವಂತೆ, 'ಕಾನೂನು ಯಾವ ವಿಷಯವನ್ನು ಯಾರ ಕರ್ತವ್ಯ ಮತ್ತು ಉಸ್ತುವಾರಿಯೆಂಬುದನ್ನು ಉಲ್ಲೇಖಿಸುತ್ತದೆಯೋ ಅಂತಹ ಕರ್ತವ್ಯವನ್ನು ನಿಭಾಯಿಸಲು ಆ ವ್ಯಕ್ತಿಗೆ ಅವರ ಯಾವುದೇ ತಪ್ಪಿಲ್ಲದೇ, ತಮ್ಮದಲ್ಲದ ಕಾರಣಕ್ಕೆ ಆ ಕರ್ತವ್ಯವನ್ನು ನಿಭಾಯಿಸುವಲ್ಲಿ ವಿಫಲರಾದರೆ, ಅಂತಹ ಪರಿಸ್ಥಿತಿಯಲ್ಲಿ ಕಾನೂನು ಆ ಕರ್ತವ್ಯವನ್ನು ನಿಭಾಯಿಸಲು ಒಬ್ಬರನ್ನು ಒತ್ತಾಯಿಸುವುದಿಲ್ಲ'* ಎಂದಿದೆ. ಇಲ್ಲಿ ಗಮನಿಸಬೇಕಾಗಿದ್ದೆಂದರೆ, **'ತಮ್ಮದಲ್ಲದ ಕಾರಣವಿದ್ದರೆ ಮಾತ್ರ'** ಕಾನೂನು ಅಂತಹ ವ್ಯಕ್ತಿಯ ಅಥವಾ ಸಂಸ್ಥೆಯ ಜವಾಬ್ದಾರಿ ನಿರ್ವಹಣೆಗೆ ಒತ್ತಾಯಿಸುವುದಿಲ್ಲ. ಆದರೆ, **ಯಾವುದೇ ಕಾರಣಕ್ಕೂ ತಮ್ಮ ಜವಾಬ್ದಾರಿಯನ್ನು ಸಕಾಲಕ್ಕೆ ಸರಿಯಾಗಿ ನಿರ್ವಹಿಸುವಲ್ಲಿ ಎಡವಿದರೆ, ಅಥವಾ ವಿಳಂಬ ಗತಿ ತೋರಿ ಪ್ರಕ್ರಿಯೆ ನಿಧಾನಿಸಿದರೆ** ಅದು ಕರ್ತವ್ಯಲೋಪ ಎಂಬುದು ಸ್ಪಷ್ಟವಾಗುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆಯ ಪ್ರಕರಣ 308ಎಎಯ ಪ್ರಕಾರ, *'ರಾಜ್ಯ ಚುನಾವಣಾ ಆಯೋಗವು ಪಂಚಾಯತ್‌ನ ಅವಧಿಯು ಪೂರ್ಣಗೊಳ್ಳುವುದಕ್ಕೆ ಮೊದಲು ಚುನಾವಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಚುನಾವಣಾ ವೇಳಾಪಟ್ಟಿಯ ಅಧಿಸೂಚನೆಯನ್ನು ಹೊರಡಿಸುವುದಕ್ಕೂ* ***ಮೊದಲಿನ ನಲವತ್ತೈದು ದಿನಗಳಿಗೆ ಕಡಿಮೆ ಇಲ್ಲದಂತೆ*** *ಸ್ಥಾನಗಳ ಮೀಸಲಾತಿಯನ್ನು ಮತ್ತು ಚುನಾವಣಾ ವೇಳಾಪಟ್ಟಿಯನ್ನು ಘೋಷಿಸತಕ್ಕದ್ದು.'* ಸ್ಥಾನಗಳ ಮಿಸಲಾತಿ ಕುರಿತಾದ ರಾಜ್ಯ ಸರ್ಕಾರದ ಅಧ್ಯಾದೇಶವು 31–03–2020ರಂದೇ ಪ್ರಕಟವಾಗಿದ್ದರೂ, ಅಂದಿನಿಂದ ಈ 2 ತಿಂಗಳ ಅವಧಿಯಲ್ಲಿ, ದಿನಾಂಕ 22–05–2020 ರಂದು ಚುನಾವಣೆ ನಡೆಸುವ ಬಗ್ಗೆ ಅಭಿಪ್ರಾಯ ಕೇಳಿ ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದ ಹೊರತಾಗಿ, ಮೀಸಲು ಸ್ಥಾನಗಳನ್ನು ಆವರ್ತನೆಯ ಮೇಲೆ ಹಂಚಿಕೆ ಮಾಡಿ ನಿಗದಿಪಡಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತಾಗಲೀ, ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ತಯಾರಿಕೆಯ ಪ್ರಕ್ರಿಯೆಯನ್ನಾಗಲೀ ಪ್ರಾರಂಭಿಸಲು ಜಿಲ್ಲಾಧಿಕಾರಿಗಳಿಗೆ ಅಥವಾ ಬೇರೆ ಯಾವುದೇ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಬಗ್ಗೆ ಎಲ್ಲಿಯೂ ಚುನಾವಣಾ ಆಯೋಗವೇ ಉಲ್ಲೇಖಿಸಿಲ್ಲ. ಹೀಗಿರುವಾಗ, **ಪಂಚಾಯತ್ ಅವಧಿ ಮುಗಿಯುವ ಕೊನೆಯಗಳಿಗೆಯವರೆಗೆ ತಾನು ನಿರ್ವಹಿಸಬೇಕಾದ ಹಲವು ಚುನಾವಣಾ ಪ್ರಕ್ರಿಯೆಗಳನ್ನು ನಡೆಸದೇ, ವಿಳಂಬ ನೀತಿ ಅನುಸರಿಸಿ, ರಾಜ್ಯ ಚುನಾವಣಾ ಆಯೋಗವು ತನ್ನ ಜವಾಬ್ದಾರಿ ನಿರ್ವಹಿಸುವಲ್ಲಿ ಕರ್ತವ್ಯಲೋಪವೆಸಗಿದೆ ಎಂದೆನಿಸುವುದಿಲ್ಲವೇ?**

ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಭಿಪ್ರಾಯದಂತೆ ರಾಜ್ಯ ಸರ್ಕಾರವು ರಾಜ್ಯದೆಲ್ಲೆಡೆ ಲಾಕ್‌ಡೌನ್ ಮಾರ್ಗಸೂಚಿಯಲ್ಲಿ ಹಲವಾರು ಅಂಶಗಳನ್ನು ಸಡಿಲಗೊಳಿಸಿ ಸಾರ್ವಜನಿಕ ಚಟುವಟಿಕೆಗಳು, ದೈನಂದಿನ ಕೆಲಸಕಾರ್ಯಗಳು, ಸಾರಿಗೆ ಸಂಪರ್ಕಗಳು ಕಾರ್ಯನಿರ್ವಹಿಸಲು ಪ್ರಾರಂಭಿಸಿವೆ. ಸರ್ಕಾರಿ–ಸರ್ಕಾರೇತರ ಕಛೇರಿಗಳು ಪ್ರಾರಂಭವಾಗಿ ತಿಂಗಳು ಕಳೆದಿದೆ. ಹೀಗಿರುವಾಗ, ಇಷ್ಟು ದಿನ ದಿವ್ಯ ಮೌನ ವಹಿಸಿದ್ದ ರಾಜ್ಯ ಚುನಾವಣಾ ಆಯೋಗವು **ಲಾಕ್‌ಡೌನ್ ನಿಯಮಗಳೆಲ್ಲಾ ಸಡಿಲಿಕೆಯಾದ ನಂತರದ ಈ ಪರಿಸ್ಥಿತಿಯಲ್ಲಿ** ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಪಟ್ಟಿ ತಯಾರಿಕೆ, ಮತದಾನ ಮತ್ತು ಮತ ಎಣಿಕೆ ದಿನಾಂಕಗಳಂದು ಓಡಾಟ ಮತ್ತು ಒಂದು ಕಡೆ ಸೇರಬೇಕಾದ ಸಂದರ್ಭಗಳು ಅನಿವಾರ್ಯವಾಗಿ ಉಂಟಾಗುವುದರಿಂದ ಜನಸಾಮಾನ್ಯರ ಆರೋಗ್ಯದ ರಕ್ಷಣೆಗೆ ಬಾಧಕ ಉಂಟಾಗುತ್ತದೆ ಎಂಬ ಕಾರಣ ನೀಡಿ ಚುನಾವಣೆ ಮುಂದೂಡಿರುವುದು ಹಲವಾರು ಅನುಮಾನಗಳಿಗೆ ಎಡೆಮಾಡಿಕೊಡುವುದಿಲ್ಲವೇ?

ಗ್ರಾಮ ಪಂಚಾಯತ್‌ಗಳಿಗೆ ನಡೆಯುವ ಚುನಾವಣೆ ಉಳಿದೆಲ್ಲಾ ಸಾರ್ವತ್ರಿಕ ಚುನಾವಣೆಗಳಿಗಿಂತ ಭಿನ್ನವಾದದ್ದು. ಒಂದು ಪಂಚಾಯತ್‌ನ ಯಥಾವತ್ ಪರಿಸ್ಥಿತಿ ಇನ್ನೊಂದು ಪಂಚಾಯತ್‌ನಲ್ಲೂ ಇದೆ ಎನ್ನಲು ಸಾಧ್ಯವಿಲ್ಲ. ರಾಜ್ಯದಾದ್ಯಂತ ಉಳಿದೆಲ್ಲಾ ಪರಿಸ್ಥಿತಿಗಳಲ್ಲಿ ಕೋವಿಡ್ ಅಗತ್ಯ ನಿಯಮಗಳನ್ನು ಪಾಲಿಸಿಯೇ ಚಟುವಟಿಕೆಗಳು ನಡೆಯುತ್ತಿರುವಾಗ, ಗ್ರಾಮ ಮಟ್ಟದಲ್ಲಿ ಈ ನಿಯಮಗಳನ್ನು ಪಾಲಿಸಿ ಚುನಾವಣೆ ನಡೆಸುವುದು ಕಷ್ಟವೇನಲ್ಲ ಎಂಬುದು ಚುನಾವಣಾ ಆಯೋಗಕ್ಕೆ ತಿಳಿಯದ ಸಂಗತಿಯೇನಲ್ಲ. ಕೋವಿಡ್ ಪರಿಸ್ಥಿತಿ ಎಲ್ಲಾ ಜಿಲ್ಲೆಗಳಲ್ಲಿ ಒಂದೇ ರೀತಿಯಾಗಿಲ್ಲ. ಆಯಾ ಜಿಲ್ಲೆಗಳ, ತಾಲೂಕುಗಳ, ಪ್ರದೇಶಗಳ ಪರಿಸ್ಥಿತಿಗೆ ಅನುಗುಣವಾಗಿ ಅಗತ್ಯವಿರುವ ಕೋವಿಡ್ ನಿಯಮ ಪಾಲಿಸಿ ಚುನಾವಣೆ ಹಾಗೂ ಅದರ ಪ್ರಕ್ರಿಯೆಗಳನ್ನು ಯೋಜಿಸಬಹುದಲ್ಲವೇ? ಹೀಗೆ ಆಲೋಚಿಸುವುದನ್ನು ಬಿಟ್ಟು, 'ಅಸಾಧಾರಣ ಪರಿಸ್ಥಿತಿ'

ಎಂಬ ಕಾರಣ ನೀಡಿ ರಾಜ್ಯ ಚುನಾವಣಾ ಆಯೋಗ ಎಲ್ಲಾ ಕಡೆ ಸಾರ್ವತ್ರಿಕವಾಗಿ ಚುನಾವಣೆಯನ್ನು ಮುಂದೂಡುವ ನಿರ್ಧಾರ ಕೈಗೊಂಡು ಪ್ರಜಾತಂತ್ರ ವ್ಯವಸ್ಥೆಯ ಮೂಲವಾದ ಸ್ಥಳೀಯ ಸರ್ಕಾರದ ವ್ಯವಸ್ಥೆಯನ್ನು ಪಲ್ಲಟಗೊಳಿಸುವ ಎಲ್ಲಾ ದುರಾಲೋಚನೆಗಳಿಗೆ ಎಡೆಮಾಡಿಕೊಡುತ್ತಿದೆಯೇನೋ ಎಂದೆನಿಸುತ್ತದೆ.

ಸಂವಿಧಾನದಲ್ಲಾಗಲೀ, ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾಯಿದೆಯಲ್ಲಾಗಲೀ ಯಾವುದೇ ಕಾರಣಕ್ಕೆ ಆಗಲೇ ಅಸ್ತಿತ್ವದಲ್ಲಿರುವ ಪಂಚಾಯತ್‌ಗಳಿಗೆ ಚುನಾವಣೆಗಳನ್ನು ಮುಂದೂಡುವ ಪ್ರಸ್ತಾಪವೇ ಇಲ್ಲ. ಸಂವಿಧಾನ ರೂಪಿಸುವಾಗ, ಕಾಯಿದೆ ರಚಿಸುವಾಗ ಈ ನಿರ್ಧಾರ ತೆಗೆದುಕೊಳ್ಳಲು ಪ್ರಬಲ ಕಾರಣವಿದೆ. ಸಂವಿಧಾನದ 40ನೇ ವಿಧಿಯಲ್ಲಿ ನೀಡಿರುವ ನಿರ್ದೇಶನದ ಹೊರತಾಗಿಯೂ, ಸಂವಿಧಾನದ 73ನೇ ತಿದ್ದುಪಡಿಜಾರಿಯಾಗುವ ಮೊದಲು ಪಂಚಾಯತ್ ರಾಜ್ ಸಂಸ್ಥೆಗಳನ್ನು ಬಲಪಡಿಸುವಲ್ಲಿ ರಾಜ್ಯ ಸರ್ಕಾರಗಳು ಹೆಚ್ಚಿನ ಗಮನವನ್ನು ನೀಡಿರಲಿಲ್ಲ. ಹೀಗಾಗಿ, ಪಂಚಾಯತ್ ರಾಜ್ ಸಂಸ್ಥೆಗಳು ದೀರ್ಘಕಾಲದಿಂದ ಅಸ್ತಿತ್ವದಲ್ಲಿದ್ದರೂ, **ನಿಯಮಿತ ಚುನಾವಣೆಗಳ ಅನುಪಸ್ಥಿತಿಯೂ** ಸೇರಿದಂತೆ ಹಲವಾರು ಕಾರಣಗಳಿಗಾಗಿ ಸಾಕಷ್ಟು ಸಬಲವಾಗಿರಲಿಲ್ಲ. ಹೀಗಾಗಿಯೇ, ಸಂವಿಧಾನದ 73ನೇ ತಿದ್ದುಪಡಿ ಮಾಡುವಾಗ ಸಂವಿಧಾನಕ್ಕೆ 9ನೇ ಭಾಗವಾಗಿ ಪಂಚಾಯತ್ ವಿಷಯವನ್ನು ಪ್ರತ್ಯೇಕವಾಗಿ ಸೇರಿಸಿದ್ದು. ಹಾಗೆ ಸೇರಿಸುವಾಗ ಪಂಚಾಯತ್ ರಾಜ್ ಸಂಸ್ಥೆಗಳನ್ನು ಸದೃಢಗೊಳಿಸಲು ಅದಕ್ಕೊಂದು ನಿಶ್ಚಿತತೆ, ನಿರಂತರತೆ ಮತ್ತು ಶಕ್ತಿಯನ್ನು ತುಂಬುವುದು ಅತ್ಯಗತ್ಯ ಎಂದು ಪರಿಗಣಿಸಿಯೇ, ಪಂಚಯತ್ ಅವಧಿಯನ್ನು 5 ವರ್ಷಕ್ಕೆ ನಿಗದಿಗೊಳಿಸಿ, ಯಾವುದೇ ಕಾರಣಕ್ಕೂ ಪಂಚಾಯತ್ ಚುನಾವಣೆಯನ್ನು ಮುಂದೂಡಬಾರದೆಂಬ ಕಟ್ಟುನಿಟ್ಟಿನ ಅಂಶವನ್ನು 243ಇ ವಿಧಿಯಲ್ಲಿ ಸ್ಪಷ್ಟಪಡಿಸಿತು.

ದಿನಾಂಕ 12ನೇ ಅಗಸ್ಟ್ 1997ರಂದು ಸರ್ವೋಚ್ಚ ನ್ಯಾಯಾಲಯ ಪಂಚಾಯತ್ ಚುನಾವಣೆಯ ಬಗ್ಗೆ ನೀಡಿದ ತೀರ್ಪಿನಲ್ಲಿ ಸಂವಿಧಾನದ ಈ ಅಂಶವನ್ನು ಹೇಳಿತು. ಅದರಂತೆ, *'ನಿಜವಾಗಿಯೂ ಮೇಲ್ವಿಚಾರಣೆಗೆ ತೊಂದರೆಯಾಗುವ ಉದಾಹರಣೆಗೆ ಅನಿರೀಕ್ಷಿತ ನೈಸರ್ಗಿಕ ವಿಪತ್ತುಗಳಾದ ಪ್ರವಾಹ, ಭೂಕಂಪ ಇತ್ಯಾದಿ ತುರ್ತು ಪರಿಸ್ಥಿತಿಯನ್ನು ಹೊರತುಪಡಿಸಿ, ಪಂಚಾಯತ್‌ಗಳ ಚುನಾವಣೆಯನ್ನು ತಡೆಹಿಡಿಯಲು ಯಾವುದೇ ರಾಜ್ಯಗಳಿಗೆ ಅನುಮತಿ ನೀಡಲಾಗುವುದಿಲ್ಲ. ಅಲ್ಲದೇ ಸಂವಿಧಾನದ 243ನೇ ವಿಧಿಯ ವಿವಿಧ ಷರತ್ತುಗಳನ್ನು ಅಕ್ಷರಶಃ ಹಾಗೂ ಅದರ ಆಶಯಗಳನ್ನು ಎಲ್ಲಾ ರಾಜ್ಯಗಳೂ ಅನುಸರಿಸಲೇಬೇಕು ಎಂಬುದನ್ನು ಒತ್ತಿಹೇಳುವುದು ಅವಶ್ಯಕ'* ಎಂದು ಹೇಳಿ ಗ್ರಾಮ ಪಂಚಾಯತ್ ವ್ಯವಸ್ಥೆ ಗಟ್ಟಿಗೊಳಿಸಲು ಚುನಾವಣೆಯನ್ನು ಸಕಾಲಕ್ಕೆ ಸರಿಯಾಗಿ ನಡೆಸಬೇಕು ಎಂಬುದನ್ನು ಪುನರುಚ್ಚರಿಸಿತು. **ಇಷ್ಟೆಲ್ಲಾ ಹಿನ್ನೆಲೆ ಇರುವಾಗಲೂ, ರಾಜ್ಯದ ಹಲವಾರು ಗ್ರಾಮ ಪಂಚಾಯತ್‌ಗಳ ಅವಧಿಯು ಕೈಬೆರಳಿನಲ್ಲಿ ಎಣಿಸುವಷ್ಟು ದಿನಗಳೊಳಗೆ ಮುಗಿಯುತ್ತಿರುವ ಈ ಕೊನೆಯ ಗಳಿಗೆಯಲ್ಲಿ, ಚುನಾವಣೆ ಮುಂದೂಡಿ ಆದೇಶಿಸಿದ ರಾಜ್ಯ ಚುನಾವಣಾ ಆಯೋಗವು ತನ್ನ ಜವಾಬ್ದಾರಿ ನಿರ್ವಹಿಸುವಲ್ಲಿ ಎಡವಿದ್ದಲ್ಲದೇ, ಗ್ರಾಮೀಣ ಕರ್ನಾಟಕದಲ್ಲಿ ಯಾವುದೇ ಸ್ಥಳೀಯ ಸರ್ಕಾರವಿಲ್ಲದ ನಿರ್ವಾತ ಪರಿಸ್ಥಿತಿ ಉಂಟಾಗುವ ಸ್ಥಿತಿಗೆ ಕಾರಣವಾಗಿದೆ.**

ರಾಜ್ಯ ಚುನಾವಣಾ ಆಯೋಗ ಹೇಳಿರುವಂತೆ, ಶಾಸನವು ನಿರ್ದೇಶಿಸಿದ ಕಾರ್ಯಕ್ಷಮತೆ ತೋರಲು ಅದರಿಂದ ಯಾವುದೇ ಕರ್ತವ್ಯಲೋಪವಾಗದೇ, ಒಂದೊಮ್ಮೆ ಚುನಾವಣೆ ನಡೆಸಲಾಗದಂತಹ 'ಅಸಾಧಾರಣ ಪರಿಸ್ಥಿತಿ' ಉಂಟಾಗಿದೆ ಎಂದಾದರೆ, ಈ 'ಅಸಾಧಾರಣ ಪರಿಸ್ಥಿತಿ' ರಾಜ್ಯದ ಎಲ್ಲಾ ಜಿಲ್ಲೆಗಳ, ಎಲ್ಲಾ ಪಂಚಾಯತ್‌ಗಳಿಗೂ ಅನ್ವಯವಾಗುವುದಿಲ್ಲ. ಆ ಕಾರಣಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಲಾಕ್‌ಡೌನ್‌ನ ಹಲವಾರು ನಿಯಮಗಳನ್ನು ಸಡಿಲಿಸಿವೆ. ರಾಜ್ಯದಾದ್ಯಂತ ಕಂಟೇನ್‌ಮೆಂಟ್ ವಲಯಗಳನ್ನು ಹೊರತುಪಡಿಸಿ, ಉಳಿದೆಲ್ಲಾ ಪ್ರದೇಶಗಳಲ್ಲಿ ದೈನಂದಿನ ಚಟುವಟಿಕೆಗಳಿಗೆ ರಾಜ್ಯ ಸರ್ಕಾರವೇ ಅವಕಾಶ ನೀಡಿದೆ. ಅಂತಹ ಅಸಾಧಾರಣ ಪರಿಸ್ಥಿತಿ ಇರುವ ಯಾವುದಾದರೂ ಇಡೀ ಜಿಲ್ಲೆಯಲ್ಲಿ, ಅಥವಾ ಕೆಲವು ಪಂಚಾಯತ್‌ಗಳಲ್ಲಿ ಇದ್ದರೆ, ಅಲ್ಲಿ ಮಾತ್ರ ಚುನಾವಣೆಯನ್ನು ಹಂತಹಂತವಾಗಿ ನಡೆಸುವ ಯೋಜನೆ ತಯಾರಿಸಬಹುದಲ್ಲವೇ? ಇಷ್ಟೆಲ್ಲಾ ಅವಕಾಶಗಳಿರುವಾಗ ಚುನಾವಣೆ ಮುಂದೂಡುವ ರಾಜ್ಯ ಚುನಾವಣಾ ಆಯೋಗದ ನಿರ್ಧಾರ ಅದರ **'ಸ್ವಾಯತ್ತತೆ'ಯ** ಮೇಲೆ ಪ್ರಶ್ನೆ ಹುಟ್ಟುಹಾಕುತ್ತಿದೆ. ಅಲ್ಲದೇ **ಚುನಾವಣಾ ಆಯೋಗದ ಈ ನಿರ್ಧಾರವು ಪ್ರಜಾತಂತ್ರ ವ್ಯವಸ್ಥೆಯ ಮೂಲ ಘಟಕವಾದ ಗ್ರಾಮ ಸರ್ಕಾರ ವ್ಯವಸ್ಥೆಯನ್ನೇ ಕಡೆಗಣಿಸಿ, ಮೂಲದಿಂದಲೇ ರಾಜಕೀಯ ಮೇಲಾಟ ನಡೆಸಲು ಅಡಿಪಾಯ ಹಾಕಿದೆ.**

ಕೃಪಾ ಎಂ.ಎಂ.
ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಕಾರ್ಯಕರ್ತರು

Mobile No: 99453 75430
Email: mm.kripa@gmail.com

